ಸಿರಿ ಗನ್ನಡಂ ಗೆಲ್ಗೆ



# FINANCIAL SERVICES

## MORTGAGE AT YOUR DOORSTEP
## (ANY PURPOSE)
## LOW INTEREST RATES

PENSIONS, REMORTGAGE,
BUSINESS INSURANCE, SCHOOL FEES,
TAX SAVING,
LIFE INSURANCE, MOTOR INSURANCE.

FOR FURTHER DETAILS CONTACT :
MR. GURU MALLESH,
FINANCIAL CONSULTANT,
MILLDON & CO. LTD. (LAUTRO APPROVED),
RING GT. ECCLESTON (0995) 71353.

**ANYTIME**

INCLUDING SATURDAY & SUNDAY

# ಸಂಪಾದಕೀಯ.

೧೯೯೧ ರ ಹೊಸ ವರ್ಷದ ನಿಮಿತ್ತ ಕನ್ನಡ ಬಳಗ ಯು.ಕೆ.ಯ ಎಲ್ಲ ಸದಸ್ಯರಿಗೆ ಹಾರ್ದಿಕ ಶುಭಾಶಯಗಳು. ಈಗ ಜಗತ್ತಿನಲ್ಲಿ ಹಲವಾರು ದೇಶಗಳಲ್ಲಿ ಗಲಭೆ, ಅಶಾಂತತೆ, ಯುದ್ಧದ ವಾತಾವರಣ ಪಸರಿಸುತ್ತ ನಡೆದಿದೆ. ಯುದ್ಧವು ಶುರು ಆಗಿ ಹೊಡೆದಾಟ ಪ್ರಾರಂಭವಾಗಿದೆ. ಇವೆಲ್ಲ ಸಮಸ್ಯೆಗಳು ಶಾಂತ ರೀತಿಯಾಗಿ ಬೇಗನೆ ಬಗೆ ಹರಿಸಿ, ಜಗಳವನ್ನು ತೊರೆದು ಮೈತ್ರಿತ್ವವನ್ನು ಬೆಳೆಸಿಕೊಳ್ಳಬೇಕು. ಸ್ನೇಹ, ಸಮ್ಮಿಲನಗಳಿಂದ ಪರರ ಮನಸ್ಸು ಒಲಿಸಿಕೊಳ್ಳಬೇಕೇ ಹೊರತು ಜಗಳ, ವೈಮನಸ್ಸುಗಳಿಂದ ಇನ್ನು ಸಮಸ್ಯೆಗಳು ಬೆಳೆಯುವವು. ಇವೆಲ್ಲ ನಿತ್ಯ ಜೀವನದಲ್ಲಿ ಮಾನವರು ಅಳವಡಿಸಿಕೊಂಡು ಜೀವಿಸಿದಲ್ಲಿ ಜಗತ್ತಿನಲ್ಲಿ ಶಾಂತತೆ ಮನೆ ಮಾಡುವದು. ಎಲ್ಲೆಡೆಗೆ ಶಾಂತತೆ ಸದಾ ಇರಲಿ ಎಂದು ನಾವು ಆಶೆ ಇಡೋಣ.

ಈ ಸಂಚಿಕೆಯನ್ನು ಪ್ರಕಟಣೆ ಮಾಡಲು ಹಲವಾರು ಮೂಲಕಾರಣ ನಿಮಿತ್ತ ವಿಳಂಬವಾಯಿತು. ಇದಕ್ಕೆ ಸಂಪಾದಕೀಯ ಮಂಡಳಿ ಕ್ಷಮೆ ಕೋರುವದು. ಹಾಗೆಯೇ ಬಳಗದ ಸದಸ್ಯರಲ್ಲಿ ಕೂಡ ಅಭಿಲಾಷೆ, ಲೇಖನ ಬರೆದು ಕಳುಹಿಸುವ ಉತ್ಸಾಹ ಕಡಿಮೆಯಾಗಬಾರದು. ಈ ಎಲ್ಲ ಸಲಹೆ, ಸಹಕಾರಗಳು ನಮ್ಮ ಬಳಗ ಸುರಕ್ಷಿತವಾಗಿ ಸಾಗಿಸಿಕೊಂಡು ಹೋಗಲು ಅತ್ಯಗತ್ಯ. ಈ ದಾರಿಯಲ್ಲಿ ಅಡಚಣೆ, ಅಡೆತಡೆ ಇದ್ದೇ ಇರುವವು. ಇವೆಲ್ಲ ಕಠಿಣವಾಗಿ ತೋರಿದರೂ, ಸಹನೆ, ಮಾನಸಿಕ ತಾಳ್ಮೆ, ಹೆಬ್ಬಯಕೆಗಳಿಂದ ನಾವೆಲ್ಲರೂ ಮುನ್ನುಗ್ಗುವದು ಅವಶ್ಯಕ. ನಮ್ಮ ಬಳಗ ಕಳೆದ ಹಲವಾರು ವರ್ಷಗಳಿಂದ ನಾನಾ ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಧಿಸಿ ಎಲ್ಲ ಸದಸ್ಯರಿಗೆ ಆನಂದ, ಕನ್ನಡದ ಬಗ್ಗೆ ಆಸಕ್ತಿ, ಅಭಿಮಾನ ಹುಟ್ಟಿಸಿದೆ. ಇನ್ನೂ ಬಗೆ ಬಗೆಯ ಮುಂ ಸಾಧಿಸತಕ್ಕ ಕಾರ್ಯಕ್ರಮಗಳನ್ನು ನಿಜರೂಪಗೊಳಿಸಬೇಕಾಗಿದೆ. ಇದಕ್ಕೆಲ್ಲ ಹೊಸ ರಕ್ತದ, ಹೊಸ ವಿಚಾರವುಳ್ಳ ಕಾರ್ಯಕಾರಿ ಮಂಡಳಿಯ ನಿಸ್ವಾರ್ಥ ಸೇವೆ ಖಂಡಿತವಾಗಿ ಬೇಕು. ಈ ಮುಂಬರುವ ಕಾರ್ಯಕಾರಿ ಮಂಡಳಿಯು ಚುನಾವಣೆಯಲ್ಲಿ ಪ್ರಜಾಪ್ರಭುತ್ವದ ತಳಹದಿ ಮೇಲೆ ಚುನಾವಣೆಯಾಗಲಿದೆ. ಮುಖ್ಯವಾಗಿ ನಮ್ಮ ಮಕ್ಕಳು ಬಳಗದ ಸಮಸ್ಯೆಗಳನ್ನು ಅರಿತು ಸಲಹೆ ಸೂಚಿಸಲು ಬನ್ನಿಹ.

ಈ ಹೊಸವರ್ಷದಿಂದು ಎಲ್ಲ ಕನ್ನಡಿಗರು ಒಮ್ಮನಸ್ಸಿನಿಂದ, ಅಭಿಮಾನದಿಂದ ಬಳಗವನ್ನು ಪ್ರೋತ್ಸಾಹಿಸಿ ಇನ್ನೂ ಭದ್ರವಾಗಿ ಕಟ್ಟುವ ಪಣ ಮಾಡಬೇಕು. ಈ ಸಂದೇಶ ಈ ಜೀವದ ಮೂಲೆ ಮೂಲೆಗೂ ಹಸರಿಸಲಿ.

- ಸಂಪಾದಕೀಯ ಮಂಡಳಿ.

* 'ಕಾಯಕವೇ ಕೈಲಾಸ.' (ಬಸವಣ್ಣ) *

* 'ಶಿರಿವಾಗಿ ಕಲ್ಯ, ಶಿರಿವಾಗಿ ಬಾಳು'. *

# ಸಂಪಾದಕೀಯ ಮಂಡಳಿ

# EDITORIAL BOARD.




*Mr. P. Narasimham*
*Chief Editor*



*Dr. Aravind S. Kulkarni*



*Mrs. Kumuda Ramaswamy*




*Mr. Guru Mallesh*


**ART COVER**
**MRS. KUMUDA RAMASWAMY**

## ಮನ್ನಣೆ


ಈ ಸಂಚಿಕೆಯಲ್ಲಿ ಪ್ರಕಟಿಸಿದ ಎಲ್ಲ ಜಾಹಿರಾತ, ಲೇಖನಗಳಿಗೆ ಕಾರಣರಾದ ಮಕ್ಕಳು, ಹಿರಿಯ ಜನರಿಗೆ ಸಂಪಾದಕೀಯ ಮಂಡಳಿ ಕೃತಜ್ಞತೆ ಸಲ್ಲಿಸುವದು. ಇಂಥ ಸಹಕಾರ, ಆಸಕ್ತಿ ಎಂದೆಂದಿಗೂ ಇರಲಿ ಎಂದು ಆಶೆ. ಅಲ್ಲದೆ ಈ ಸಂಚಿಕೆಯನ್ನು ಅಂದವಾಗಿ ಪ್ರಕಟಿಸಲು ಶ್ರೀ. ಜಾನ ಲವೆಲ್ - ಈಸನ್ ಪ್ರಿಂಟರ್ಸ ಮ್ಯಾನ್ಸಫೀಲ್ಡ ಅವರಿಗೂ ಕೃತಜ್ಞತೆಗಳು.

# EXECUTIVE COMMITTEE MEMBERS


President
Dr. N.S. Ramaswamy


Secretary
Dr. Abhayamba Murthy


Treasurer
Dr. M.S. Swamy


Dr. D.M. Devaraj


Mr. Guru Mallesh


Dr. Shreegowri Ginimav


Dr. C.S. Jayakumar


Smt Indu Jayakumar


Dr. R.S.S. Krishna Murthy


Mr. P. Narasimham


Mrs. Vijaya Ravindra


Mr. T.N. Reddy


Dr. G. Sreekantha


Dr. R. Vibhuti


Dr. Aravind S. Kulkarni


Dr. (Mrs.) Sneha A. Kulkarni


Dr. R.S.S. Setty

# ಅಧ್ಯಕ್ಷರ ಸಂದೇಶ

ಪ್ರಿಯ ಸದಸ್ಯರೇ,

ನಮ್ಮ ಕಾರ್ಯಕಾರಿ ಸಮಿತಿಯ ಎರಡು ವರುಷಗಳ ಆಡಳಿತ ಮುಗಿಯುತ್ತಿದೆ. ಈ ಎರಡು ವರುಷಗಳಲ್ಲಿ ನಮ್ಮ ಬಳಗದ "ಆಜನ್ಮ ಸದಸ್ಯ"ರ ಸಂಖ್ಯೆ ನೂರರ ಹತ್ತಿರ ಬರುತ್ತಲಿದೆ. ಬಳಗದ ಯುಗಾದಿ, ನವರಾತ್ರಿ ಹಬ್ಬಗಳು ಈ ಎರಡು ವರುಷಗಳಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಹೊಸ ಮುಖಗಳೂ, ಚಿಕ್ಕಮಕ್ಕಳೂ, ಭಾರತದಿಂದ ಬಂಧು ಮಿತ್ರರ ಭೆಟ್ಟಿಗೆಂದು ಬಂದ ಅಪ್ಪರೂ ಬಂದು ಸಂತೋಷಪಟ್ಟು ಕಾರ್ಯಕ್ರಮಗಳಲ್ಲಿ ಪಾತ್ರವಹಿಸಿದುದನ್ನು ಕಂಡು ಬಹಳ ಹೆಮ್ಮೆಯಾಯಿತು. ಅಲ್ಲದೆ ಎಲ್ಲ ಕಾರ್ಯಕಾರಿ ಮಂಡಳಿಯ ನಿಸ್ವಾರ್ಥ ಸೇವೆ, ಸಾಧನೆ ಸಾರ್ಥಕವಾಗಿ ಪರಿಣಮಿಸಿತು. ನಾಲ್ಕಾರು ವಾರಗಳ ಹಸಿಗೂಸುಗಳನ್ನು ತಳ್ಳುಬಂಡಿಯಲ್ಲಿ ಕರೆದುಕೊಂಡು ಬಂದ ಎಳೆಯ ತಂದೆ ತಾಯಿಗಳ ಹಸನ್ಮುಖಗಳನ್ನು ನೋಡಿದಾಗ ನಮ್ಮೂರಿನ ಹಬ್ಬದ ದಿನದ ವಾತಾವರಣ ಜ್ಞಾಪಕ ಬಂದಿತು!

ಯಾವ ಸಮಾರಂಭ ಎಲ್ಲಿಯೇ ನಡೆಸಿದರೂ ಕನ್ನಡಿಗರು ಆಮಂತ್ರಣ ಪತ್ರಿಕೆಗೆ ಮನ್ನಣೆ ನೀಡಿ ಗುಂಪು ಗುಂಪಾಗಿ ಬಂದು ಸಮಾರಂಭದಲ್ಲಿ ಭಾಗವಹಿಸಿ, ಅತಿಥಿ ಸಮಿತಿಗೆ ಬೆಂಬಲ ನೀಡಿ ಸಮಾರಂಭವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟುದುದಕ್ಕೆ ನಮ್ಮ ಕಾರ್ಯಕಾರಿ ಸಮಿತಿಯ ಪರವಾಗಿ ನಾನು ನಿಮಗೆಲ್ಲ ಕೃತಜ್ಞತೆ ಸಲ್ಲಿಸುವೆ.

ನಮ್ಮ ಕನ್ನಡ ಬಳಗದ ಅದೃಷ್ಟಕ್ಕೆ ನಾವು ಎಲ್ಲಿ ಸಮಾರಂಭ ಏರ್ಪಡಿಸಿ-ದರೂ ಆದಿನ ತಪ್ಪದೇ ಸೂರ್ಯದೇವರೂ ಹಾಗೂ ವಾಯುದೇವರೂ "ಇಂಗ್ಲ ದೇಶದ ಹವಾಗುಣಕ್ಕೆ" ಕರುಣೆ ನೀಡುತ್ತ ಬಂದಿರುವರು. ಆಗ್ಗೆ, ನಮ್ಮ ಹೆಣ್ಣು ಮಕ್ಕಳ ಉಡುಗೆ ವೈಖರಿ, ಚಿಕ್ಕ ಮಕ್ಕಳ ಆಟಪಾಟ, ಹಿರಿಯ ಜನರ ಹರಟೆ ಮಾತುಗಳು, ಕೇಳ ಬರುತ್ತಿದ್ದುವು.

ಇದೇ ರೀತಿ ಎಲ್ಲ ಸದಸ್ಯರು ಇನ್ನು ಮುಂದೆಯಾದರೂ ಗುಂಪು ಗುಂಪಾಗಿ ಬಂಧು ಸ್ನೇಹಿತರ ಸಮೇತವಾಗಿ ಬಂದು ಕನ್ನಡ ಬಳಗದ ಉತ್ತೇಜನಕ್ಕೆ ಬೆಂಬಲ ಕೊಡುವಿರೆಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ಇತಿ,
ಎನ್. ಎಸ್. ರಾಮಸ್ವಾಮಿ.
ಅಧ್ಯಕ್ಷ,
ಕನ್ನಡ ಬಳಗ ಯು.ಕೆ.

'ಹಾಲಿದ್ದಾಗ ಹಬ್ಬಾ ಮಾಡು' (ಗಾಳಿ ಬಿದ್ದಾಗ ತೂರಿಕೋ.)

'Make hay while the sun shines.'

'ಬಹತಿ ಗಂಗಾ ಧೋ ಲೇ ಹಾಂಥ'. (ಹಿಂದಿ.)

HIGH FLYING!

DATE.................FRIDAY 16TH MARCH 1990

TIME..............APPROXIMATELY 1500HR

PLACE..............DOORWAY OF AN AEROPLANE??!!

What was going on? What on earth (except I wasn't) was I doing sat in the doorway of a very small aeroplane watching the world go by? There must be a good reason, no-one in their right mind sits in the open doorway of an aeroplane when it is in the air!!

Well let me backtrack and start from the beginning. Are you siting comfortably? Then I'll begin.......

It all began as a small idea in November 1989. I was at university at the time,(so I was sharing a house). One of my housemates, Emma, had been chatting with her brother who had seen an advert in the paper which involved an exciting way to raise money for Cancer Research. A worthy cause indeed and it certainly gave us more of an incentive to do what we wanted to do.

After plucking up enough courage, we sent off for the sponsor forms and a date for our charity event. A few weeks later (after much placating of parents!) we got a date.....March 3rd 1990. I must thank my father Dr. R.S.R. Setty at this point for all his help and support in getting lots of sponsors from the hospital for me, without his help I think I would have found it very difficult to raise the £250 pounds that I got. Thanks Dad!

The day finally dawned - a nerve racking day indeed. We'd travelled down to Chichester the night before and stayed with friends. There were 5 of us altogether........... 5 people shaking in their shoes. We were to be trained in the morning and then actually perform in the afternoon. We completed our training but due to poor visibilty and weather conditions, we had to leave Chichester to return another day.

That day being Friday March 16th. The sun was shining, the wind was right. We were actually going to do our parachute jump!!

Yes, that's what I was doing sitting in the doorway of an aeroplane. We had to be retrained when we got there so that we knew exactly what we were doing. We were the first planeload up - there were only four of us now and I was the first one out!!!! AARRGH!! But first we had to be airborne to make it all worthwhile.

When we reached our jump out height (3500ft), the instructor threw out a roll of crepe paper over the X we were to aim for, to test the wind direction and speed.

Then it was our turn with me first. The instructor said " GO! GO! GO!" and after a moments hesitation I leapt out with my eyes tightly shut. It takes approximately 3 - 5 seconds for the parachute to open... the longest time of my life! My first thought was " Thank God it opened!" closely followed by " WOW! What a view !" ( I had of course opened my eyes by this time!). The parachutes we used were not the traditional round ones but square ones used by professional sky-diving teams (we were with the Flying Tigers) because of their ease of handling.

There is no sensation of falling, just a peaceful, floaty feeling. We all performed a few acrobatics (nothing amazing but it felt good!). It is one of the most amazing feelings in the world and something that I'm glad to have done. Try it...... if you dare!

By Meera Setty

# HIGHLIGHTS OF OUR CHILDRENS' ACHIEVEMENTS



SEETA KALGHATGI (8 years old) became the Junior Deputy Mayor of Chester earlier this year. She won an essay and painting competition in which over 40 schools in the Chester area took part. This was the first time since records began in Chester (1217) that junior civic officers were installed. She was officially installed at a council meeting and given a chain of office. She had to take part in several public functions including an open day at Chester Town Hall, where along with the Mayor, Cllr. John Price, she was the official hostess and welcomed hundreds of visitors during the day. On her final day of office the Mayoral Rolls Royce picked her up and took her to the zoo where, in a special function, she declared open the new aquarium. She, her parents and brother, Nikhil, were then taken on a special tour of the zoo along with the Mayor and other guests by the Director of the zoo. She was the bought back home in the Rolls Royce. During this period her photograph appeared several times in the local newspapers.

---



VIKRAM NAGARAJ (11 years old) son of Mr. & Mrs. Nagaraj of Walsall won a full merit scholarship at Hydesville Tower School, Walsall, to study upto G.C.S.E. (i.e. Senior School). He competed with children a year older than himself.

---

## THE DUKE OF EDINBURGH AWARD

### GOLD AWARDS

The following youngsters were invited to receive the Duke of Edinburgh Gold Award by His Royal Highness Prince Phillip, Duke of Edinburgh:-

Mr. Avinash Aravind Kulkarni –
son of Dr. Aravind Kulkarni and Dr. Mrs. Sneha A. Kulkarni, of Mansfield.

Miss Suma Setty –
daughter of Dr. and Mrs. R.S. Suryanarayan Setty of Oldham.

### BRONZE AWARD

The Duke of Edinburgh Bronze Award was received by:-

Miss Hema Setty –
daughter of Dr. and Mrs. R.S. Suryanarayan Setty of Oldham

---

EXAMINATION PASSES AND APPOINTMENTS

Prof. Shirahatti, a visiting Fellow, passed F.R.C.S. (General Surgery) during his short stay of one year in the United Kingdom.

Dr. Hariprasad of Truro, Cornwall, passed D.L.O.

Dr. Nagaraja of Walsall was appointed as a Community Physician in Bromsgrove.

Latha Jayakumar, daughter of Dr. and Mrs. Jayakumar of Oldham, graduated from Manchester Medical School obtaining an M.B., Ch.B., degree and starts work as a House Officer at The Royal Preston Hospital.

Nagaraj Murthy, son of Dr. and Mrs. Jayakumar of Oldham, graduated from St. Andrew's University having gained a First Class Honours Degree in Mathematics and Statistics and starts Accountancy with Ernst & Young in Manchester.

---

## Indian Festivals and Holidays, 1991

| | |
|---|---|
| Tue Feb 12 | Maha Shivratri |
| Thu Feb 28 | Holi (Holika-Dehana) |
| Fri Mar 1 | Holi |
| Sun Mar 17 | Chaitra Sukladi/Gudi Padava/Ugadi/Cheti Chand |
| Sun Mar 24 | Ramnavami |
| Thu Mar 28 | Mahavir Jayanti |
| Fri Mar 29 | Good Friday |
| Fri Apr 12 | Jumat-Ul-Vida |
| Sun Apr 14 | Vaisakhi/Meshadi |
| Mon Apr 15 | Vaishkhaili/Bahag Bihu/Vishu |
| Wed Apr 17 | Idu'l Fitr |
| Tue May 28 | Buddha Purnima |
| Sun Jun 23 | Idu'l Zuha (Bakrid) |
| Sat Jul 13 | Rath Yatra |
| Tue Jul 23 | Muharram |
| Thu Aug 15 | Independence Day |
| Sat Aug 24 | Parsee-New Year's Day/Onam |
| Sun Aug 25 | Raksha Bandhan |
| Mon Sep 2 | Janmashtami |
| Wed Sep 11 | Ganesh Chaturthi/Vinayak Chaturthi |
| Sun Sep 22 | Milad-un-Nabi or Id-e-Milad |
| Wed Oct 2 | Mahatma Gandhi's Birthday |
| Wed Oct 16 | Maha Ashtami/ Dussehra, Maha Navami |
| Thu Oct 17 | Dussehra (Vijaya Dashami) |
| Wed Oct 23 | Maharishi Valmiki's Birth Day |
| Tue Nov 5 | Diwali (Deepavali - S. India)/ Naraka Chaturdasi |
| Thu Nov 7 | Govardhan Punja |
| Fri Nov 8 | Bhai Duj |
| Thu Nov 21 | Guru Nanak's Birthday |
| Wed Dec 11 | Guru Tej Bahadur Martyrdom Day |
| Wed Dec 25 | Christmas Day |

QUOTATIONS

*From the unreal lead me to the Real;*
*From the darkness lead me to Light;*
*From death lead me to Immortality.*

– Upanishads

*Where is the life we have lost in living?*
*Where is the wisdom we have lost in knowledge?*
*Where is the knowledge we have lost in information?*

– T.S. Eliot

*Let noble thoughts come to us from every side.*

– Rigveda

DONATIONS

Kannada Balaga U.K. proudly presented £300 to Yakshagana Troup from Karnataka during their recent tour.



*Presentation of the cheque for £300 by Kannada Balaga U.K. to Yakshagana Troup*

* * * * *

Kannada Balaga U.K. also donated £250 to Cancer Research (Crest Appeal) in 1990.

---

THE OZONE LAYER RAP

We are destroying, yes all of us,
Our Ozone Layer that was put in our trust,
On CFC's there should be a ban,
So the people of the world won't get an extra tan.
Turn green now, don't wait until too late,
You'll regret it later when the world is in a state.
What this rap is trying to tell you,
Is that if you turn green now, the world will too.

By MAYUR VIBHUTI
Woldersdale, Kent.

◆ ◆ ◆ ◆ ◆

PROBLEMS RESOLVED

After the brutal World War Two,
The Nations grieved, built and grew,
The West made an agreement, the terms were low,
But, it worked out well, and it was called NATO.

Enough of the problemed past,
It's 1990, a year to last,
Communism is no longer a threat,
Defying this law was usually death,
Democracy has come to life,
Leading people on, in their strife,
Problems resolved this is a pick,
The cruelty involved could make you sick,
Supplies to Ethiopa we do send,
But, that is another poem, this is THE END.

By MAYUR VIBHUTI
Woldersdale, Kent.

## LOGIC PUZZLE

## THE STUDENT PROBLEM

Five students going back to their universities are queuing up at Paddington Station. They all have different Surnames (Black, Brown, Green, Smith and White), different first names, study different subjects, take part in different sports and are going to different places.

1. Nick is a Chemistry Student.
2. The Maths Student is Second in line.
3. Black is going to Bristol.
4. Brown is going to Exeter.
5. The Physics Student is three places behind Sue.
6. John plays Soccer.
7. The Hockey player is third in line.
8. The Student at the head of the queue goes to Oxford.
9. Helen is last but one.
10. The Law Student goes swimming.
11. White is behind th Squash player.
12. Green is at the end of the queue.
13. The Physics Student is going to Reading.
14. Brown is behind Smith.
15. White is behind the Maths Student.
16. Tom is in front of the Student going to Exeter.
17. The History Student is behind the Student going to Bath.

So what is each Student's full name, the University he or she attends, the subject he or she studies, the sport he or she plays and his or her place in the queue.

COLLECTED BY UMA JAYAKUMAR.

ANSWERS TO THE STUDENT PROBLEM:

| | | | | |
|---|---|---|---|---|
| 1st | Tom Smith | Law | Oxford | Swimming |
| 2nd | Sue Brown | Maths | Exeter | Squash |
| 3rd | Nick White | Chemistry | Bath | Hockey |
| 4th | Helen Black | History | Bristol | Tennis |
| 5th | John Green | Physics | Reading | Soccer |

## ಲಂಕಾಷೈರಿನಲ್ಲಿ ಯುಗಾದಿ:

ಪುರಾತನ ಕಾಲದಿಂದಲೂ ಪ್ರಖ್ಯಾತಿ ಹೊಂದಿದ ಲಂಕಾಷೈರ ವಿಶ್ವವಿದ್ಯಾನಿಲಯದ ವಾತಾವರಣದಲ್ಲಿ, ಸೂರ್ಯದೇವನ ಹೊಂಬಣ್ಣದ ಕಿರಣಗಳು ಚಿನ್ನದ ಬಣ್ಣಕ್ಕೆ ತಿರುಗುತ್ತಿರುವಾಗ ಫೆಬ್ರವರಿ ಮಾರ್ಚ್ ಗಳಂ ಚಳಿಗೆ ಇಂಗ್ಲೆಂಡಿನ, ವೇಲ್ಸ್ ಮತ್ತು ಸ್ಕಾಟ್ಲೆಂಡಿನ ನಾನಾ ಭಾಗಗಳಿಂದ ಕನ್ನಡಿಗರು ಯುಗಾದಿಯನ್ನು ಆಚರಿಸಲು ಹೊಸ ಹೊಸ ಬಣ್ಣಗಳ ಉಡಿಗೆಗಳಿಂದ ಅಲಂಕರಿಸಿಕೊಂಡು ತಮ್ಮ ತಮ್ಮ ಕುಟುಂಬ ಮತ್ತು ಬಂಧು ಮಿತ್ರರೊಂದಿಗೆ ಬಂದು ಕೂಡಿದರು. ಕಾಫಿ, ಟೀ ಕುಡಿದು ಮಿತ್ರರ ಭೇಟಿ ಮಾಡಿ, ಮನದಣಿಯೆ ಉಭಯ ಕುಶಲೋಪರಿ ಮಾಡಿದ ಮೇಲೆ ಎಲ್ಲರೂ ಪ್ರಾಯೋಜಕ ವೇದಿಕೆಗೆ ಹಜಾರದಲ್ಲಿ ಬಂದು ಸೇರಿದರು. ಸಣ್ಣ ಮಕ್ಕಳು "ಧರಣಿ ಮಂಡಲ ಮಧ್ಯದೊಳಗೆ" ಎಂಬ ಚಿನ್ನದ ನಾಟ್ಯ ರೂಪದಲ್ಲಿ ಮಾಡಿದಾಗ ಎಲ್ಲರ ಕಣ್ಣುಗಳೂ ಮಂಜುಗಟ್ಟಿತು. ಎಲ್ಲಾ ವಯಸ್ಸಿನ ಮಕ್ಕಳೂ ಮನೋರಂಜನೆಯ ಕಾರ್ಯಕ್ರಮದಲ್ಲಿ ಪಾಲುಗೊಂಡು ಅವರವರ ತಂದೆ ತಾಯಿಗಳನ್ನು ತುಂಬಾ ಹೆಮ್ಮೆಗೊಳಿಸಿದರು. "ಪಾತಮ್ಮನ ಏಕಾದಶಿ ವ್ರತ" ಹಾಸ್ಯ ಹೊಟ್ಟೆ ಬಿರಿಯುವಷ್ಟು ನಕ್ಕೆವು.

ಆ ದಿನ ಆದಿತ್ಯವಾರ ಸಂಜೆ ಎರಡು ಸಾವಿರ ದೂರದಿಂದ ಹೊಸ್ತಿಲಿಗೆ ಬಂದಿತು ಜನ: ಊಟದ ಸಮಯದಲ್ಲಿ ಇದರಿಂದ ಸ್ವಲ್ಪ ನಿಶ್ಶಬ್ದದಿಂದ ಹಾಗೇ ಸಮಾರಿಸಿಕೊಂಡು ಬಿಟ್ಟರು.

ಮಧ್ಯಾಹ್ನ A.G.M. ನಡೆದಾಗ ಮಾತ್ರ ಸ್ವಲ್ಪ ಮನಸ್ಸಿಗೆ ಕಿರಿಕಿರಿ ವಂಶದ ಕೆಲವ ಸದಸ್ಯರು ನಡೆದುಕೊಂಡರು, ಹೊಸದಾಗಿ ಬಂದ ಕೆಲವರು ಬೆರಗಾಗಿ ಬಿಟ್ಟರು "ಇದೇನು ದಬ್ಬಾಳಿಕೆ ಕಾದಿ ಇಷ್ಟು ಜಗಳವಾಡತಾರಲ್ಲ" ಎಂದು. ಹೇಗಿದ್ದರೂ ನಮ್ಮ ಜೀವನದಲ್ಲಿ "ಬೇವು ಬೆಲ್ಲ" ಎಲ್ಲಾ ಬಂದೇ ಬರಬೇಕಾಗಿರುತ್ತದೆಯ ಹೇಳುವುದಕ್ಕೆ ಸಾರ್ಥಕವಾಗಿ ಕಹಿ ಸಿಹಿ ಎರಡೂ ಇದ್ದಿತು.

ಸಂಜೆ ಮಕ್ಕಳ Disco ಮುಗಿದ ಮೇಲೆ "ಪ್ರೆಂಡ್ಸ್ ಕೂಟ" ಇದ್ದಿತು. ಬಂದವರೆಲ್ಲ ಪಾಲುಗೊಂಡು ಕುಣಿದು ಕುಪ್ಪಳಿಸಿ ಸಂತೋಷಪಟ್ಟು, ತಂತಮ್ಮ ಮನೆಗಳಿಗೆ ಮರಳಿ ಹೋದರು.

ಲೇಖಕಿ: ಕುಮುದಾ ರಾಮಸ್ವಾಮಿ.





*Ugadi Celebration at Lancaster 31.3.90*

# ಕನ್ನಡ ಬಳಗ ಇಂದು - ಮುಂದು (ಹಿಂದು ಮುಂದು)

ಲೇಖಕರು:- ಡಾ|| ರೇವಣಸಿದ್ದ ಪಿ. ಬೆಗಾರಿ.

ಇಲ್ಲಿಯವರೆಗೆ 6-7 ಯುಗಾದಿ, ದೀಪಾವಳಿಗಳನ್ನು ಮನಸ್ಸಂತೋಷವಾಗಿ ಆಚರಿಸಿ ನಮಗೆ ತಿಳಿದವರು ತಿಳಿಯದವರು ಎಲ್ಲರನ್ನು ನೋಡಿ ಪರಿಚಯ ಮಾಡಿಕೊಂಡು, ಊಟ ಮಾಡಿ, ಆಟವಾಡಿ, ಭಾಷಣ ಕೇಳಿ, ಮನೋರಂಜನೆ ಕೇಳಿ ಮತ್ತೆ ಮನೆ ಸೇರಿದ್ದೇವೆ.

ಇಷ್ಟಾದರೂ ಕನ್ನಡ ಬಳಗ ಸಾಧಿಸಿದ್ದು! ಇಷ್ಟಕ್ಕೆ ನಿಂತರೆ ನಮ್ಮ ಮಕ್ಕಳಿಗೆ ತೃಪ್ತಿ ಇಲ್ಲದೆ - "ನಾನು ಬರೋಲ್ಲ, ಮನೇಲಿ Video ನೋಡ್ತೀನಿ, ನೀವು ಬೇಕಾದ್ರೆ ಹೋಗಿ, ಊಟ ಮಾಡಿ ಬನ್ನಿ, As usual" ಎಂದು ಹೇಳುತ್ತಾರೆ.. ಎಂಬ ಸ್ಥಿತಿಗೆ ಬರಬಹುದು

ಇಲ್ಲಿಯವರೆಗೆ ನಮ್ಮ ನಾಡಿನ ಪ್ರಯೋಜನವನ್ನು ನಮಗಿತ್ತ ಕನ್ನಡಿಗರನ್ನು ಬಿಟ್ಟುಕೊಟ್ಟಿದ್ದ ಬಳಗ ನಮ್ಮ ಕಲೆಯೊಂದಿಗೆ ನಿಲ್ಲಬೇಕೇ? ಅಥವಾ ನಾವು ನೆಲೆಸಿದ ನಾಡಿನಲ್ಲಿ ನಮ್ಮ ಮುಂದಿನ ಪೀಳಿಗೆಗೆ ಅವರ ಪ್ರಾಚೀನ [illegible] ಕೀರ್ತಿ ತಿಳಿಸಿ ಅವರಲ್ಲಿ ಅಭಿಮಾನ ತುಂಬಿಸಿ ಬೆಳೆಸಲಿಕ್ಕೆ ಪಂಡಿತರಾಗ ಬೇಡವೇ?

ಆದರೆ... ಇಂತಹ ಸಂಸ್ಥೆ ಮಾಡಲು ಜನ ಬೇಕು ಹಣ ಬೇಕು, ಹಠ ಬೇಕು. ನಮ್ಮಲ್ಲಿ ಹಣ, ಜನ ಎರಡೂ ಇದ್ದರೂ ಹಠ ತೊಟ್ಟು ಮುಂದಕ್ಕೆ ಬರುವವರಿಲ್ಲ.

ಕಳೆದ ಎರಡು ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ಹಣ ಕೊಡಲು ಮುಂದೆ ಬಂದಿತ್ತು! ಆ ಹಣವನ್ನು ಹಾಗೆ ಪಡೆಯಲು ಮಂತ್ರಿಗಳ ಜೊತೆಗೆ ಮಾತುಕತೆ ಮಾಡುವುದೆಂದು ಪ್ರಯತ್ನ ಪಟ್ಟೆವೇ? ಮಂತ್ರಿಗಳ ಜೊತೆಗೆ ಫೋಟೋ ತೆಗೆದುಕೊಂಡು, ಕೈ ಕುಲುಕಿ, [illegible] ಅವರ ಪಕ್ಷ ಮುಳುಗಿ ಕಾಲ ಕಳೆದವು. ಹೊರಡು ಕೊಡಲು ಬಂದ ಹಣ ವಸೂಲು ಕೆಲಸ [illegible] ಯಾರೂ ಪ್ರಯತ್ನ ಪಡಲಿಲ್ಲ. ನಮ್ಮ ಮರೆವು ಸರಿಯಾಗಿ ಮಂತ್ರಿಗಳೂ, ಸರ್ಕಾರವೂ ಬದಲಾಯಿಸಿವೆ. ಬದಲಾದರೇನು? ಹಾಗದ ಪತ್ರಗಳಿಲ್ಲವೇ? ನಮ್ಮ ಬಳಿ ಇರುವ ಪತ್ರಗಳನ್ನು ನಾವು ಸರಿಯಾಗಿ, ಸರಿಯಾದ ವ್ಯಕ್ತಿಗಳಿಗೆ ಪ್ರಾರ್ಥಿಸಿದರೆ ಕೊಡುತ್ತಾರೆ

ಅದನ್ನು ಇಟ್ಟು ಆ ವ್ಯಕ್ತಿಗೇ ಬರೆಯಬೇಕು, ಕಾರ್ಯದ
ಪರಿಕ ಆ ವ್ಯಕ್ತಿಯ ಸುಮಾರು, ಕಾರ್ಯಕಾರಿ ಸಮಿತಿಗೆ
ಪ್ರತಿ ಶಬ್ದ ವಿಚಾರಿಸಿಯೇ ಕೆಲಸ ಮಾಡಬೇಕು ಎಂದು
ಆವಾಗಲೇ ಚರ್ಚೆಯಲ್ಲಿ ಹೇಳಿ ಕೇಳಿಯದೆ, ಒಂದೊಂದು
ಕಾರ್ಯವನ್ನು ಒಂದೊಂದು ವ್ಯಕ್ತಿಗೆ ವಹಿಸಿ ಕೊಟ್ಟು ಆ
ವ್ಯಕ್ತಿಗೆ ಬೆಂಬಲ ನೀಡಿ ನಮ್ಮ ಬಳಗದ ಹಿರಿಮೆಯನ್ನು
ಕಾಯುಂ ನಿಲ್ಲುವ ಉದಾರ ಗುಣ ನಮ್ಮಲ್ಲಿ ಎಂದು ಬರುತ್ತದೆ?

ನಾವೇ ಆಯ್ದ ಅಧ್ಯಕ್ಷರಲ್ಲಾಗಲೀ, ಕಾರ್ಯದರ್ಶಿಗಳಲ್ಲಾಗಲಿ
ಅಥವಾ ಕಾರ್ಯಕಾರಿ ಸಮಿತಿ ಸದಸ್ಯರಲ್ಲಾಗಲೀ ನಾವು ನಂಬಿಕೆ
ತೋರಿಸಿ, ಅವರು ಪಟ್ಟ ಶ್ರಮವನ್ನು ಅರ್ಥ ಮಾಡಿಕೊಂಡು ಅವರ
ವಿಷಯ ವಾರ್ಷಿಕ ಸಭೆಯಲ್ಲಿ ವಿವೇಚಿಸಬೇಕಾಗ ಇದು
ಸಮಂಜಸವೇ ಅಲ್ಲವೇ ಎಂದು ಯೋಚಿಸದೆ ಒಂದೇಟಿಗೆ
ತಳ್ಳಿಹಾಕಿ ಬಿಟ್ಟರೆ ಯಾವ ನ್ಯಾಯ?

ಸಂಸ್ಥಾಪನ ವಾರ್ಷಿಕ ಸಮಿತಿಯಲ್ಲಿ ನಾವು
ನಡೆಸಿದ ಚರ್ಚೆ ಮತ್ತು ನಡತೆ ಯಾರಿಗಾದರೂ ಭೂಷಣ
ವಾಗಿದೆ? ಅದು ನಮ್ಮ ಮಕ್ಕಳಿಗೆ ಮತ್ತು ಅಭ್ಯಾಸಿಕರಿಗೆ
ಒಳ್ಳೆಯ ಉದಾಹರಣೆಯೇ?

ಕಾರ್ಯಕಾರಿ ಸಮಿತಿ ರಚನೆಯ ಚುನಾವಣೆಗೆ
ಬೇಕಾದಷ್ಟು ಅಂಶಿಂತ ಅರ್ಥ ಜನ ಚುನಾವಣೆಗೆ ನಿಂತು ಪಾಲಿಯ
ವರನ್ನು ಬಲವಂತ ಮಾಡಿ ನಿಲ್ಲಿಸಲಾಯಿತು. ಅಂತಹವರು ಹೇಳಿದ್ದೇ
ಮಾತ್ರ ಸದಸ್ಯನಾಗುವುದಕ್ಕಿಂತ ಹೊರಗಿರುವುದೇ ಇಷ್ಟ ಪಡುವುದು ಎಂದು
ಮೊದ್ದು ಭಾಷಣ ಮಾಡಿ ಚಪ್ಪಾಳೆ ತಟ್ಟುವುದಕ್ಕೆ ಬದಲಾಗಿ
ಅಷ್ಟು ಜನ ಯಾಕೆ ಮುಂದಕ್ಕೆ ಬರಬಾರದು?

ಇದೇ ರೀತಿಯಲ್ಲಿ "TRUST" ಮಾಡುವ ವಿಷಯ.
"ಕನ್ನಡ ಬಳಗ ಧರ್ಮದಾಯಕ ಸಂಸ್ಥೆ" ಎಂದು ಇರುವುದರಿಂದ
ವರ್ಷದ ಕೊನೆಯಲ್ಲಿ ನಾವು ಬೇರೆ ಬೇರೆ ಆಸ್ತಿಗಳಿಂದ
ಬಳಗಕ್ಕೆ ಕೂಡಿಸಿದ ಹಣವನ್ನು ಧರ್ಮದಾಯಕ ಸಂಸ್ಥೆಯ
ಹೆಸರಿನಲ್ಲಿ ಕಾಯಿದೆಗಳ ಅನುಸಾರವಾಗಿ ಇಟ್ಟುಕೊಳ್ಳಲು
ಬರುವುದಿಲ್ಲ. ಬೇರೆ ಧರ್ಮ ಸಂಸ್ಥೆಗಳಿಗೆ ದಾನ ಮಾಡಬೇಕಾದುದು

ಇಲ್ಲವೇ ಕೇಳ್ವೆ. ನಮ್ಮದು ಇನ್ನೂ ಎಳೆಯ ಸಂಸ್ಥೆ. ಈಗ ಕೂಡಿಸಿದ ಹಣವನ್ನು ಬೆಳೆಸುವರಿಗೆ ಕೊಡುವುದಕ್ಕಿಂತ ನಮ್ಮದೇ ಆದ ಬಳಗದ ಒಂದು ಆಫೀಸ್ ವಾಚನಾಲಯ ಎಂದು ಮಾಡಿ ಈ ಹಣವನ್ನು ನಮ್ಮೆಲ್ಲ ಉಪಯೋಗಿಸಿ ಕೊಳ್ಳುವಂತಹ ಒಂದು ಯೋಜನೆ ಹಾಕಿಕೊಳ್ಳಬೇಕು ಎಂದು ನಮ್ಮೆಲ್ಲರ ಅಭಿಲಾಷೆ. ಈ ವಿಚಾರ ವ್ಯಯಕ್ತಿಕವಾದ ಕೆಲವರಿಗೆ ಹಿಡಿಸಲಿಕ್ಕಿಲ್ಲ. ಅಂತಹವರು ತಿಳಿಸಿದಲ್ಲಿ ತಮ್ಮ ಸಂದೇಹದ ಪ್ರಶ್ನೆಗಳನ್ನು ಚರ್ಚೆಮಾಡಿ ಸಂಪಾದಕ ಬಗೆಹರಿಸುವುದು ನ್ಯಾಯ.

ಇದನ್ನು ಬಿಟ್ಟು "TRUST" ಆಜೀವ ಸದಸ್ಯರಿಗೆ ಮಾತ್ರ ಇದೆ. 10,000 ಹಿಂದು ಕೊಟ್ಟರೆ ಅವರು ಬೇಕಾದರೂ ಆಗಬಹುದು ಎಂದು ಉಪಕರಣನ್ನು ಘೋಷಣೆ ಮಾಡಿ TRUST ಮಾಡಲಿ ಬಾರದು ಎಂದು ಪ್ರಾರ್ಥನೆ ಸಭೆಯನ್ನು ಸಂಪೂರ್ಣ ಪರಿಸ್ಥಿತಿಗೆ ತಂದರೆ ಕನ್ನಡ ಬಳಗದ ಅಭಿವೃದ್ಧಿ ಇಂದಾ ಜನರ ಸ್ಥಿತಿಗೆ ತಂದಂತೆ ಆಗುತ್ತದೆ.

ವಾರ್ಷಿಕ ಸಭೆ ಒಂದು ಗಂಭೀರದ ವಿಷಯ ಚರ್ಚೆ ಚಿಂತನೆಗಳ ಚರ್ಚೆ ಮತ್ತು ಎಲ್ಲಾ ಕೆಲಸಗಳು ಆಯ್ಕೆಗಳ ಆದೇಶವಲ್ಲ ನಡೆಯಬೇಕು. ಈಗಾಗಲೇ ಎಲ್ಲಾ ಸದಸ್ಯರಿಗೆ ಆಹ್ವಾನ ಮಾಡಿದ ವಿಷಯಗಳನ್ನು ತಿಳಿಸಿಯಲ್ಲಿ ಚರ್ಚಿಸಬೇಕೆಂಬುದು ನಿಯಮ. ಆ ನಿಯಮವನ್ನು ಬಗೆಹರಿಸಿ ಮಾಡಿದಲ್ಲಿ ಬಲ ಉಳ್ಳವರು ಈ ಕ್ಷಣ ಈ ಸಭೆಯಲ್ಲಿ ತನ್ನದೊಂದು ವ್ಯವಹಾರ ಬಗೆಹರಿಸಿ ಕೊಳ್ಳುವ ಸಂಸ್ಥೆಕೊಂಡು ನಿಂತರೆ ಉಚಿತವೇ? ಇದು ನಮ್ಮ ಸಂಸ್ಥೆಗೆ ಹೊಂದಿಕೊಡುವ ಉದಾಹರಣೆಯೆ? ವ್ಯಯಕ್ತಿಕ ಬೇಧಭಾವಗಳನ್ನು ಕೊಡುವ ಉದಾಹರಣೆಯೆ? ವ್ಯಯಕ್ತಿಕ ಬೇಧಭಾವಗಳನ್ನು ಬಗೆಹರಿಸಿಕೊಂಡು ಸಂಸ್ಥೆಯ ಹೊರಗೆ ಬಗೆಹರಿಸಿ ತಮ್ಮ ತಮ್ಮಲ್ಲಿ ಎಲ್ಲರ ಮುಂದೆ ಬರಬೇಕು ವಿನಹ ಸಂಸ್ಥೆಯ ಮುಂಬದಿಯಲ್ಲಿ ಎಲ್ಲರ ಮುಂದೆ ಯುದ್ಧಕ್ಕೆ ನಿಲ್ಲಬಾರದು. ಇದಲ್ಲದೆ ಅದು ಅನ್ಯಾಯ. ಇನ್ನು ಬೇಕಾಗಿದೆ. ಈಗಲಾದರೂ ಕೆಲಸಗಾರ ನಮ್ಮ 'TRUST' ಉದ್ದೇಶ ಮತ್ತು, ಇದರ ಸಂವಿಧಾನ ಏನು, ಯಾವಾಗ ಪ್ರಕಟಿಸುವುದು ಎಂದು ಸಕಲ ಸದಸ್ಯರಿಗೆ ತಿಳಿಸಿ ಮಾಡಿ ಹೇಳಬೇಕು ಏಕೆ? ಕನ್ನಡ ಬಳಗ ಒಂದು - ಮುಂದಾಗಲಿ (ಮುಂದಾಗಲಿ) ಇಬ್ಬರ ಕಷ್ಟ ಎನ್ನದೆ ದೃಢ ನಿರ್ಧಾರದಿಂದ ಮುಂದುವರಿಯುವುದೆಂದು ಆಶಿಸೋಣ.

## ಪದ್ಮಭೂಷಣ, ಪಂಡಿತ ಭೀಮಸೇನ ಜೋಶಿಯವರ ಸಂಗೀತ ಕಾರ್ಯಕ್ರಮ

ಕೆಲವು ವರ್ಷಗಳ ಹಿಂದೆ ಪಂಡಿತ ಭೀಮಸೇನ ಜೋಶಿಯವರು ಇಂಗ್ಲಂಡಿಗೆ ತಮ್ಮ ಸಂಗೀತ ಕಾರ್ಯಕ್ರಮ ನೀಡಲು ಬಂದಾಗ್ಗೆ ನನಗೆ ಅವರ ಭೆಟ್ಟಿಯಾಗುವ ಲಾಭ ಸಿಕ್ಕಿತ್ತು. ಆಗ್ಗೆ ತಾವು ಖಂಡಿತವಾಗಿ ಮುಂದಿನ ಬಾರಿ ಇಂಗ್ಲಂಡಿಗೆ ಬಂದಾಗ ಮಿಡ್‌ಲ್ಯಾಂಡಿನಲ್ಲಿ ಸಂಗೀತ ಕಾರ್ಯಕ್ರಮ ಕೊಡುವದಾಗಿ ಭರವಸೆಯಿತ್ತಿದ್ದರು. ಇದನ್ನು ಈ ವರ್ಷ ಅವರು ಮರೆಯದೇ ತಾವಾಗಿಯೇ ಅಕ್ಟೋಬರ (೧೯೯೦) ೧೪ರಂದು ನಾಟಿಂಗ್ಹಾಮದಲ್ಲಿ ಸಂಗೀತ ಕಾರ್ಯಕ್ರಮ ಕೊಡಲು ಒಪ್ಪಿದರು. ಈ ಕಾರ್ಯಕ್ರಮ ಸಾಂಗವಾಗಿ, ಯಶಸ್ವಿಯಾಗಿ ನೆರವೇರಿಸಲು ನನ್ನ ಪತ್ನಿ, [ಪರಮ ಮಿತ್ರರಾದ] ಡಾ. ಜಿ. ಆರ. ಕುಲಕರ್ಣಿ ಮತ್ತು ಶ್ರೀಮತಿ ಅವರೂ, ಶ್ರೀಮತಿ ಮತ್ತು ಡಾ. ಸ್ವಾಮಿ, ಶ್ರೀಮತಿ ಮತ್ತು ಡಾ. ಸ್ವಾಮಿ, ಶ್ರೀಮತಿ ಮತ್ತು ಡಾ. ಶಿರೂರ, ಶ್ರೀಮತಿ ಮತ್ತು ಡಾ. ಕುರವತ್ತಿ, ಶ್ರೀಮತಿ ಮತ್ತು ಡಾ. ರಾಜಶೇಖರ, ಡಾ. ಅಭಯಕುಮಾರ ಮೂರ್ತಿ, ಮತ್ತು ಶ್ರೀ. ಉತ್ಕರ್ಷ ಜೋಶಿ, ಇವರೆಲ್ಲ ಮುಂದೆ ಬಂದು ಸಲಹೆ, ಸಹಾಯ ನೀಡಿದರು. ನಾನು ಅವರಿಗೆಲ್ಲ ಚಿರಋಣಿ.

೧೪ನೇ ಅಕ್ಟೋಬರ ೧೯೯೦ ರಂದು ನಾಟಿಂಗ್ಹಾಮದ ಹಾರ್ಕಮ್ಯೂಸೆಂಟರದಲ್ಲಿ ಸಾಯಂಕಾಲ ಮೂರು ಘಂಟೆ ಕಾಲ ಪಂಡಿತಜಿಯವರು ಅಲ್ಲಿ ನೆರೆದ ನೂರಾರು ಜನ ಸಂಗೀತ ಪ್ರೇಮಿಗಳಿಗೆ ತಮ್ಮ ಸಂಗೀತ ಸರಣಿ ಹಲವಾರು ಅಪೂರ್ವ ರಾಗ, ಭಜನೆಗಳ ಔತಣ ನೀಡಿ ಮನಸ್ಸನ್ನು ಸೂರೆಗೊಂಡರು.


ಮಧ್ಯಂತರದಲ್ಲಿ ಅವರಿಗೆ ಮತ್ತು ಅವರ ಜೊತೆಗೆ ಬಂದ ಉಳಿದ ಕಲಾವಿದರಿಗೆ ಪುಷ್ಪಗುಚ್ಛ, ಶಾಲು, ದ್ರವ್ಯರೂಪಕ ಕಾಣಿಕೆ ಸಲ್ಲಿಸಲಾಯಿತು. ಆಗ್ಗೆ, ಪಂಡಿತ ಜೋಶಿಯವರು ನೂರು ಪೌಂಡು ನೀಡಿ ಕನ್ನಡ ಬಳಗಕ್ಕೆ ಆಜೀವ ಸದಸ್ಯರಾದರು. ಇದು ನಮ್ಮೆಲ್ಲರ ಸೌಭಾಗ್ಯವೇ ಸರಿ. ಎರಡನೇ ಭಾಗದಲ್ಲಿ ಅವರು "ಭಾಗ್ಯದ ಲಕ್ಷ್ಮಿ" ಇಂಥ ಭಜನೆಗಳನ್ನು ಹಾಡಿ ನೆರೆದ ರಸಿಕರನ್ನು ಸಂಗೀತ ಲೋಕಕ್ಕೆ ಕರೆದೊಯ್ದು ಅಮೃತಪಾನ ಮಾಡಿಸಿಬಿಟ್ಟರು. ಆ ಮಧುಮಯ, ಸಂತಸದ ವಾತಾವರಣದ ಅನುಭವ ಅಲ್ಲಿ ನೆರೆದ ರಸಿಕ ಪ್ರೇಮಿಗಳಿಗೆ ಮಾತ್ರ ಲಭಿಸಿತು!

ಈ ಸಂಗೀತ ಕಾರ್ಯಕ್ರಮ ಅತೀ ಯಶಸ್ವಿಯಾಗಿ, ಸಾಂಗವಾಗಿ ಜರುಗಿತು ಎಂದು ವರದಿ ನೀಡಲು ನನಗೆ ಹೆಮ್ಮೆ. ಈ ಕಾರ್ಯಕ್ರಮದಿಂದ ಬಂದ ೨೫೦ ಪೌಂಡು (ಲಾಭ) ಕನ್ನಡ ಬಳಗಕ್ಕೆ ನಮ್ಮ ಕಾಣಿಕೆ ಕೊಡಲಾಯಿತು. ಇಂಥ ಸಹಕಾರ, ನಿಸ್ವಾರ್ಥ ಭಾವನೆ ಇನ್ನು ಮುಂದೆ ಸದಾ ಸಾಗಲಿ.

* ಡಾ. ಅರವಿಂದ ಕುಲಕರ್ಣಿ.
ಮೂಲ ಕಾರ್ಯಕರ್ತ.



*From left to right:*
- *Shashikant Mulay – Tabala*
- *Madhav Gudi – Vocal accompanist*
- *Mrs. Joshi – Tanpura*
- *Padma Bhushan Pandit Bhimsen Joshi*
- *Miss Shubhada Joshi (Pandit's daughter)*
- *Purushottam Walawalekar – Harmonium*



*Dr. Aravind S. Kulkarni welcoming the artists and the audience*



*A glimpse of the captive audience*

# ಪ್ರೊಫೆಸರನ ಹರಟೆ!

ಎಷ್ಟೋ ಬರೆನೆಲ್ಲಿ, ದೀಪಾವಳಿ ಸಮಯದಲ್ಲಿ ಕನ್ನಡ ಕೂಟ, ಸಮ್ಮೇಳನ ಬಂದಾಗ, ಕೈ ಕೆರೆತ ಏನದೂ ಕುರೀತು, ಏನಾದರೂ ಬರೀಬೇಕು; ಏನು ಬರೀಲಿ? ........

ಏನೋ ಒಂದು ಬರೀಬೇಕು, ಕನ್ನಡದಲ್ಲಿ ಬರೀತಾ ಇದ್ದೀನಿ ಅಂತನ್ನೋದೇ ಹೊರತು ಏನು ಬರೀತೀನಿ ಅಂತನ್ನೋದು ಅಲ್ಲ (ಯಾಕೆಂದ್ರೆ, ನಾನು ಬರೆದಿದ್ದು ನಾನು ಓದೋಲ್ಲವಲ್ಲಾ, ಬೇರೆಯವರು ತಾನೆ ಓದೋದು!) ಮಹಾಜನರು ಮನ್ನಿಸಬೇಕು, ಕನ್ನಡಿಗರು ಭಾಳ ಸಾಧು ಸ್ವಭಾವದವರು, "ಹಸುಗೂಸಿನಂತಹ" ಮನಸ್ಸು, 'ಹಸು'ವಿನಂತ ಸ್ವಭಾವಿ, ಅಂತ ಧೈರ್ಯ; ಏನು ಬರೆದರೂ ಗಲಾಟೆ ಮಾಡದೆ ಓದ್ತಾರೆ, ಓದದೆ ಇದ್ದರೂ ಎದುರಿಗೆ ಸಿಕ್ಕಾಗ "ಥೂ" ಅಂತ ಉಗಿಯಲ್ಲ, 'ಕಿ ಚೆಟಾ' ಅಂತ ಬಹಿರಂಗ ಬಹಿಷ್ಕಾರ ಹಾಕೊಲ್ಲ.

ಬರೀಬೇಕು ಅಂತ ಮನಸ್ಸು ಮಾಡಿದ್ದಾಯ್ತು. ಮೊದಲ್ಗೆ ನೆನಪಿದ್ದ ಕೊರಗುಗಳಿಗಾಗಿ, ಏನು ಬರೆದರೂ ಫಲವಾಗಿಲ್ಲ ಅಂತ ಧ್ಯೇಯವಾಗಿದ್ದು ಆಯಿತು. ಬೇರೆ ಯಾವುದರ ಮೇಲೆ ಬರೆಯೋಣ, ವಿಷಯಾನೇ ಹೊಳೀತಿಲ್ಲವಲ್ಲಾ?

ವಿಜ್ಞಾನದ ಮೇಲೆ ಬರೆಯೋಣ, ವೈಜ್ಞಾನಿಕ ವಿಷಯಗಳ ಬಗ್ಗೆ "ಮೂಢ" ಜನಗಳಿಗೆ ಬಂದಷ್ಟು ತಿಳಿಸ್ಕೊಡೋಣ ಅಂದ್ರೆ ಹೇಳಿ ಕೇಳಿ ಇದು ನಮ್ಮ "ನಾಚಿಕೆ ಹಳ್ಳಿ ನಾಗನ ಬುದ್ಧಿ" ಪೇಪರಿನಲ್ಲಿ ತಿಂಗಳಿಗೊಂದ್ಸಲ ಬರೋ "ವಿಚಿತ್ರ ವಿಶ್ವ" ಕಾಲಂ ಅಂತೂ ಅಲ್ಲ; ಓದುಗರು ಆ ಹಳ್ಳಿಲಿ ಇರೋ "ನೇಗಿಲು ಹೊತ್ತ ರೈತ"ರಲ್ಲಿ ಎಲ್ಲಾರೂ ವಿಜ್ಞಾನಿಗಳು, ಡಾಕ್ಟರುಗಳು ಯಾ ಇಂಜಿನಿಯರುಗಳು, ಮನಸ್ಸಿಗೆ, ಬಾಯಿಗೆ, ಕೈಗೆ ಬಂದಂಗೆ ಬರೆಯೋ ಸ್ಟೈಲು ಆಗೋದಾಗಿಲ್ಲ; ವಿಷ್ಯ ಹಾಕಿ ಕೊಳ್ತೀನಿ.

ಇನ್ನ ಬೆಂಗಳೂರಿನಲ್ಲಿ ಸಂಪಾದಕರಿಗೆ ಕಾಗದ ಬರೆದು ಹಾಕಿ 'ರಸ್ತೆ ತುಂಬಾ ಹೊಂಡಗಳು', ನೀರಿನ ಪೈಪು ಒಡೆದು ಬಹಳ ಕೊಂಡಕ", ಕಾರ್ಪೊರೇಷನ್ ಯಾಗಾದ ಮಾತಿಗಳ ಸೋಮಾರಿತನ, "ರೂಟ ನಂ. ೪೨೦ ಬಿ ಬಸ್ ಅವಕನಲ್ಲಿ ಇನ್ನು ಮೂರು ಮೈಲಿ ಓಜ 'ಭಜರಂಗಬಲಿ ನಗರದ ವರೆಗೆ' ಓಡಿಸಬೇಕು" ಅಂತ 'ಸ್ಟಂಡ್' ಸಮಸ್ಯೆಗಳ ಬರೆಯೋ ಹಾಗಿಲ್ಲ. ಬರೆದ್ರೂ ಸಂಪಾದಕರು ಕಸದ ಬುಟ್ಟಿಗೆ ಹಾಕ್ತಾರೆ. ಹೇಗಾದ್ರೂ ಮಾಡಿ ನನ್ನ ಲೇಖನ ಅಚ್ಚಾಗ ಬೇಕು ಅನ್ನೋ ಒಂದು ಉದ್ದೇಶ ವ್ಯಯವಾಗಿ ಸೋತು ಹೋಗುತ್ತೆ.

....... ಇನ್ನೂ ತಲೆ ಕೆರೆಸ್ಕೊಳ್ತಾ ಇದ್ದೀನಿ, ಏನೂ ಹೊಳೀತಿಲ್ಲ

ಪ್ರಾಮಾಣಿಕವಾಗಿದ್ರೆ ಹುಟ್ಟಬೇಕಾಗಿತ್ತು. ಏನೂ ವಿಷಯ ಇಲ್ಲದೆ
ಗಂಟೆಗಟ್ಟಲೆ ಶಂಖ ಊದೋ, ಪುಟಗಟ್ಟಲೆ ಬರೆಯೋ ವಿದ್ಯೆ
ಗಾರಿಕೆ, ಬಹುಶಃ ವಿರಳ ಇರ್ತಿತ್ತು. ಅಥವಾ ನಾಟಕ
ಪುಸ್ತಕ ಯಾ 'ಮಾಡರ್ನ್ ಆರ್ಟ್' ನಂಥ ಚಿತ್ರದ ಮೇಲೆ
ವಿಮರ್ಶೆ / ವಿವರಣೆ ಬರೆಯೋ ಬುದ್ಧಿಜೀವಿ 'critic'
ಆಗಿದ್ರೆ ಯಾರಿಗೂ ಅರ್ಥ ಆಗದೇ ಇದ್ರೂ ಅರ್ಥ ಆದ ಹಾಗೆ.
ಇರೋದು ಓದೋವರಿಗೆ!

ಪ್ರವಾಸದ ಬಗ್ಗೆ ಬರೀಲಾ? ನಾವೇನೂ ಇಲ್ಲಿಗೆ
ಬಂದು ಐದು ತಿಂಗಳಾಗಿದೆ, ಯಾವುದೂ ಜಾಗಾನೇ ನೋಡಿಲ್ಲ
(ಶೇಕ್ಸ್‌ಪಿಯರ್" ನ ಊರು ಬಿಟ್ರೆ) ಇವನ್ನ ಎಲ್ಲಾರೂ ಇಲ್ಲಿ
ಸಾವಿರ ಸಲ ನೋಡಿರ್ತಾರೆ.)

"ಗಲ್ಫ್ ಕ್ರೈಸಿಸ್' ಬಗ್ಗೆ ಬರೆದ್ರೆ ಹೇಗೆ ಅಂತಂದ್ಕೊಂಡೆ
ಪ್ರಸಿದ್ಧ ಲೇಖಕ ಏನಾದರೂ ಬರೆಯ,
ಆದರೆ ನನ್ನಂಥ ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಾದಾಸ್ಪದ
ಹೆಚ್ಚು ಕಮ್ಮಿ ಆದ ತೊಂದರೆಯಾದೀತೆಂದು ವಿವೇಚನಾಶೀಲ
ಚರ್ಚೆಗೊಳಗಾಗಿ, ಸುಮ್ಮನಾಗ ಬೇಕಾಯ್ತು. ವ್ಯಂಗ್ಯಚಿತ್ರ ಪ್ರಶಸ್ತಿ
ಮಾತೃಪ್ರೀತಿಯಿಂದ
ಸಿಂತ ವಿಶ್ವ ಶಾಂತಿ ಮುಖ್ಯ ನೋಡಿ!!*

ಒಂದು ಮಾತು ಹೇಳ್ತೀನಿ ಕೇಳಿ, ನನ್ನಂಥ ಉದಯೋ
ನ್ಮುಖ ಬರಹಗಾರರು, ಕ್ರಿಸ್ತ ಹುಟ್ಟಿ ಎರಡು ಸಾವಿರ ವರ್ಷ ಆದ
ಮೇಲೆ ಹುಟ್ಟಬಾರದಾಗಿತ್ತು. ಬಹಳ ತಡವಾಗಿ ಹೋಯಿತು. ಒಂದು
ಸಾವಿರದಷ್ಟು ವರ್ಷ ಮುಂಚೆ ಹುಟ್ಟಿದ್ರೆ ಏನು ಬರೆದ್ರೂ
ಅದ್ವಿತೀಯ ಬರಹವಾಗ್ತಿತ್ತು. "ಕವಿರಾಜಮಾರ್ಗ"
'Pioneer' ಅಂತ ಕನ್ನಡ ಪುಸ್ತಕ ಅಂತ ಯಾವನೋ ಮಹಾಶಯ
ಬರೆಯೋ ಮೊದಲು (ಹೆಸರು ಜ್ಞಾಪಕಕ್ಕೆ ಬರ್ತಾ ಇಲ್ಲ) ಹೆಸರು ಮಾಡಿದನಲ್ಲ! ಹಾಗೆ.

ಏನು ಮಾಡೋದು! ಎಲ್ಲಾ ಹಣೆ ಬರಹ. ಹೋಗಲಿ
ಮುಂದಿನ ಸಮ್ಮೇಳನದವರೆಗೂ ಒಂದು ಗಟ್ಟಿ ವಿಚಾರ ಆರಿಸ್ಕೊಂಡು
ಬರೆಯೋಕೆ ಶುರು ಮಾಡಬೇಕು. ಅದರ ಬಗ್ಗೆ ಗಹನವಾದ ಧ್ಯಾನದಲ್ಲಿ
ಮುಳುಗಿ ಹೋಗಲಿಕ್ಕೆ ಅವಕಾಶ ಕೊಡಿ ಸ್ವಾಮಿ! ಬರ್ಲಾ? ನಮಸ್ಕಾರ.

ಲೇಖಕ: ಡಾ. ಶಶಿಧರ ಹಾರೋಹಳ್ಳಿ.
S.H.O. in Paediatrics,
East Birmingham Hospital, BIRMINGHAM.

* ಈ ಲೇಖನ ನಮ್ಮ ಕೈಗೆ ಬಂದಾಗ "ಗಲ್ಫ್ ವಾರ್" ಶುರು ಆಗಿರಲಿಲ್ಲ.
ಸಂಪಾದಕೀಯ.

## ೧೯೯೦ ದೀಪಾವಳಿ:

ಲೇಖಕಿ: ಕುಮುದಾ ರಾಮಸ್ವಾಮಿ

ಬರ್ಮಿಂಗ್ಹಾಮ್ ಆತಿಥೇಯ ಸಮಿತಿಯವರು, ಅಕ್ಟೋಬರ್ ೨೦, ೧೯೯೦ ರಂದು ದೀಪಾವಳಿ ಹಬ್ಬವನ್ನು ಬಹು ವಿಜೃಂಭಣೆಯಿಂದ ನಡೆಯಿಸಿಬಿಟ್ಟರು. ಬೆಳಗ್ಗಿನ ಆಹ್ವಾನ ಸಮಿತಿಯ ಹೆಣ್ಣುಮಕ್ಕಳು ಚೆನ್ನಾಗಿ ಅಲಂಕರಿಸಿಕೊಂಡು, ಸಾಲಾಗಿ ನಿಂತು ನಗು ನಗುತ್ತಾ ಬಂದವರನ್ನೆಲ್ಲಾ ವಿಚಾರಿಸಿಕೊಂಡು, ಬ್ಯಾಡ್ಜ್‌ಗಳನ್ನೂ, ಕುಂಕುಮ ಗಂಧಗಳನ್ನೂ ನೀಡಿ ಆ ದಿನದ ಕಾರ್ಯಕ್ರಮಗಳ ಶುರು ಮಾಡಿದರು; ಪೂಜೆ, ಊಟ ಎಲ್ಲಾ ಕುಂದು ಕೊರತೆಯಿಲ್ಲದೆ ಆದರದೊಂದಿಗೆ ಮುಗಿದು ಹೋಯಿತು.

ಮನೋರಂಜನೆಯ ಕಾರ್ಯಕ್ರಮವನ್ನು ನಾಲ್ಕು ಕನ್ಯೆಯರು ಸುಂದರವಾಗಿ ಒಂದೇ ವಿಧವಾಗಿ ಅಲಂಕರಿಸಿಕೊಂಡು ದೀಪಗಳನ್ನು ಹಿಡಿದು ನೃತ್ಯಮಾಡಿ ಶುರು ಮಾಡಿದಾಗ ಆಕಾಶದಿಂದಿಳಿದು ಬಂದ ಕಿನ್ನರಿಯರ ಹಾಗಿದ್ದರು. ನಾಲ್ವರೂ ಒಂದೇ ಅಭಿನಯನ ಅನುಸರಿಸಿ, ಸ್ವಲ್ಪವೂ ಅಳುಕದೆ ಮಾಡಿದ ನೃತ್ಯವು ಅವರನ್ನು ತರಪೇತು ಮಾಡಿದವರಿಗೆ ನಿಜವಾಗಿಯೂ ಮನ್ನಣೆ ಮತ್ತು ಹೆಮ್ಮೆ ನೀಡಿತು. ಶ್ರೀಮತಿ ಚಂದ್ರಿಕಾ ಭೋಸಲೆ ಅವರ ನೃತ್ಯ ಎಷ್ಟು ನೋಡಿದರೂ ಮನದಣಿಯದಿತ್ತು. ಚಿಕ್ಕ ಮಕ್ಕಳಿಂದ ಅಭಿನಯಿಸಲ್ಪಟ್ಟ "ಸತ್ಯ ಸಾಯಿಬಾಬಾ" ನಾಟಕ ಬಹು ಚೆನ್ನಾಗಿತ್ತು.


ಎಲ್ಲದಕ್ಕೂ ಹೆಚ್ಚಾಗಿ ಭಾರತ ದೇಶದಿಂದ ಬಂದಿದ್ದ ನಮ್ಮ ಕರ್ನಾಟಕದ ನಟಿ ಗೀತಾ ಮತ್ತು ಚಿತ್ರ ನಿರ್ಮಾಪಕ ರವಿ ಯಾದವ ಅವರು ಇಲ್ಲಿ ಬಂದು ಆ ದಿವಸ ಭಾಗವಹಿಸಿದ್ದು ಬಹು ಹೆಮ್ಮೆಯ ವಿಷಯ. ಗೀತಾ ಮತ್ತು ರವಿ ಬೆಂಗಳೂರಿನವರು. ಕರ್ನಾಟಕದ ಪ್ರಖ್ಯಾತ ಶ್ರೀ ಶಂಕರ ನಾಗರವರು ತಮ್ಮ ಅಕಾಲ ಮರಣಕ್ಕೆ ಕೇವಲ ಕೆಲವು ದಿವಸಗಳ ಹಿಂದೆ ಇವರನ್ನು ಇಂಗ್ಲೆಂಡಿಗೆ ಬಂದಾಗ ಖಂಡಿತ ಕನ್ನಡ ಬಳಗವನ್ನು ಭೇಟಿ ಮಾಡಿ ಬರಬೇಕೆಂದು ಒತ್ತಾಯವಾಗಿ ಹೇಳಿದ್ದರಂತೆ. ಸ್ವಿಟ್ಸರ್ಲ್ಯಾಂಡಿನವರು ಇವರನ್ನು ಅಲ್ಲಿಯ ಚಿತ್ರೋತ್ಸವಕ್ಕೆ ಕರೆಯಿಸಿಕೊಂಡಿದ್ದರು. ದಾರಿಯಲ್ಲಿ ಮರಳಿ ಮನೆಗೆ ಹೋಗುವ ಮುಂಚೆ ಹಾಗೆಯೇ ಇಲ್ಲಿಗೂ ಬಂದು ಹಲವಾರು ಕನ್ನಡಿಗರ ಮನೆಗಳಲ್ಲಿ ಆತಿಥ್ಯ ಸ್ವೀಕರಿಸಿ ದೀಪಾವಳಿಯ ಹಬ್ಬದ ಸಮಾರಂಭದಲ್ಲಿ ಪಾಲುಗೊಂಡು ಆ ಸಂಜೆಯ ಸಮಯದಲ್ಲಿ ಇಲ್ಲಿ ಕೆಲವರನ್ನು ತರಪೇತುಮಾಡಿ, ನಾಟಕವಾಡಿ ಎಲ್ಲರನ್ನೂ ಹೊಟ್ಟೆ ಬಿರಿಯುವಂತೆ ನಗಿಸಿಬಿಟ್ಟರು.

ಹೊಟ್ಟೆಯ ತುಂಬಾ ಮಧ್ಯಾಹ್ನ ಭರ್ಜರಿ ಊಟ ಮಾಡಿದ ಮೇಲೆ ಈ ಮನೋರಂಜನೆಯ ಮೇಲೋಗರ ಸೊಗಸಾಗಿತ್ತು. ಒಟ್ಟಿನಲ್ಲಿ ಆ ದಿನವೂ ಬೆಚ್ಚಗೆ ಬೆಳಗಿದ್ದು ದೀಪಾವಳಿಯು ವಿಜೃಂಭಣೆಯಿಂದ ಕಳೆಕಳೆಯಾಗಿ ನಡೆದು ಹೋಯಿತು. ಆ ದಿನದ ಆತಿಥೇಯ ಸಮಿತಿಯವರು ಕೈಗೊಂಡಿದ್ದ ಶ್ರಮಕ್ಕೆ ಸಾರ್ಥಕ

*Deepavali Celebration at Walsall 20.10.90*









# ದೀಪಾವಳಿ

೫-೧೯-೧೦-೧೯೯೦

ವರುಷವರುಷಕ್ಕೆ ಹೊಸ ಹರುಷ ತಾಳಿ
ಬರುತಿದೆ, ದೀಪಾವಳಿ ಪಾಲಾವಳಿ ॥ ಪ ॥

ಇಳಿಸಿ ಮುನಿಸಿ ಜೀವನದಿ ಮರೆತು ಮಮತಾ
ಅಕ್ಕರೆಯ ಸಂಸಾರ ಕತ್ತಲೆಯ ದೂಡು ತಾ
ಜನರ ಮನೆಯಲಿ ವಿಶ್ವ ಬೆಳಗಿಸಿ ದೀಪಾ ॥೧॥

ಇದು ದಿವದ ಭಾರತದ ಹಬ್ಬವಿದು
ಇದೆಯರು ಸಂಭ್ರಮದಿ ಕಂಚು ಕಲಶ ಹಿಡಿದು
ಆದರದಿ ಸಿರಿ ಶಾರದೆಯ ಪೂಜೆ ಮಾಡುವರು ॥೨॥

ಮೊದಲು ದಿನ ಪುಣ್ಯದೊಳು ನೀರ್ದುಂಬು ಹಬ್ಬ
ಸಡಗರದಿ ಸುತ್ತವರದರೆ ಮಾಲಿಂಗ ಬಳ್ಳಿ
ಬಡತನವ ನೀಗಿ ಬಳಗ ಬೇಗ ಬೆಳೆಯಲೆಂದು ॥೩॥

ಎರಡನೆಯ ದಿನ ನರಕ ಚತುರ್ಥಿ
ನರಕಾಸುರನ ಕೊಲೆಗೈದರ್ಶ ಯಿಂ
ಸುರರು ನಲಿದು ಭುವಿಯು ನಲಿಸಿದ್ದಾ ದಿನ ॥೪॥

ಮೂರನೆಯ ದಿನ ಕಾಳಿಕಾದೇವಿ ಲೋಲಾಪ್ಪೆ
ಗರತಿಯರು ಪೂಜಿಸರು ಮಹಾಲಕುಮಿಯು
ಸಿರಿ ಬರಲೆಂದು ಮನ ಮನಕೆ, ಮನೆಗೆ ॥೫॥

ನಾಲ್ಕನೆಯ ದಿನ ಆಚರಿಸರು ಸಂಭ್ರಮದಿ
ಚಕ್ರವರ್ತಿ ಬಲಿಯಾದ ಬಲಿ ಪಾಡ್ಯವೆಂದು
ಅಕ್ಕರದಿ ನೆನವರಾ, ರಾಜನ ದಾನ ಮಹಿಮೆಯ ॥೬॥

ಆತನ ನೆನಪಿಗಾಗಿ ಅಭ್ಯಂಗ ಸ್ನಾನ ಮಾಡಿ
ಪಾತಿಕಯದಿ ಬೆಳಗುವರು ನಾರಿಯರಾರುತಿ.
ನಲಿಯುತ ಮಾನವತೆಗೆ ಜಯವಾಗಲೆಂದು ॥೭॥

ಮೂರುವರೆ ಮುಹೂರ್ತದ ಪಾಡ್ಯದ ದಿನ
ಸರ್ವರೂ ಮಾಸ್ತರು ಲಕ್ಷ್ಮಿರಾಯರ ಪೂಜೆ ಆದಿನ
ಆರಂಭ, ವಿಕ್ರಮ ಶಕೆ ಇಂದು; ಎಂದೆಂದಿಗೂ ॥೮॥

ಹೊಸ ಮನೆಗೆ ಹೋಗುವರಂದು ಶುಭದಿನ
ಹೊಸ ಉದ್ಯೋಗ ಪ್ರಾರಂಭಿಸುವರಂದು ಶುಭ ಲಾಭ
ಹೊಸ ಉಡುಗರುಬ್ಬು ಎಲ್ಲೆಲ್ಲೂ ಹೊಸತನ, ಹಸತನ ॥೯॥

ಹೆಣ್ಣುಮಕ್ಕಳು ಸಂತಸದಿ ತವರಿನೊಳು ಹಬ್ಬಮಾಡಿ
ಅಣ್ಣ ತಮ್ಮರ ಕರೆದೊಯ್ಯುವರು ತಮ್ಮ ತಮ್ಮ ಮನೆಗೆ
ಮನ್ನಣೆಯ ಮಾಡಿ ಕಳುಹುವರು ನಲಿದಾಡುತ ॥೧೦॥

ಐದು ದಿನ ಹಬ್ಬ ಮಾಡಿಹರು ಹಿರಿಯರು
ಐದು ಇಂದ್ರಿಯಗಳ ಜಯಿಸಿ ಜಸ ಪಡೆಯಲೆಂದು
ನೈದು ಆತ್ಮವು ಮಹಾತ್ಮದಿ ಪರಮಾತ್ಮನಾಗಲೆಂದು ॥೧೧॥

ನಿನ್ನಾತ್ಮ ಪರಮಾದೊಡೆ ಎಲ್ಲೆಡೆಗೆ ಝಗಮಗ
ಹೊನ್ನಾರತಿ ಬೆಳಗುವದು ದಶದಿಶೆಗೆ ಝಗ ಝಗ
ಚೆನ್ನತನ ಹರಡುವದೆ ಚೆಲುವ ದೀಪಾವಳಿ ॥೧೨॥

ನಿನ್ನಾತ್ಮ ಜ್ಯೋತಿ ಬೆಳ್ಳಂ ಬೆಳಗುತ
ಅನ್ನಗರಾತ್ಮ ಬೆಳಗಿಸಲಿ ಬೆಂಬಿಡುತ
ಸನ್ನುತನೆ, ದೀಪದಿ ದೀಪ ಮುಡಿಸಿ ಬೆಳಗುತ ॥೧೩॥

ಪ್ರಣತಿಯೊಳಗೆ ಎಣ್ಣೆ ತೀರದ ಮುನ್ನ
ಸಣ್ಣಾದ ಬತ್ತಿ ಸುಟ್ಟಾರದ ಮುನ್ನ
ಗಣ್ಣನೆ, ಹಚ್ಚು ಜ್ಯೋತಿಗೆ ಜ್ಯೋತಿ ಚೆನ್ನ ॥೧೪॥

ದೀಪಾವಳಿ ಸಾರುವದು ಭುವಿಗೆ ಸಂದೇಶ
ದೀಪಗಳ ಸಾಲಿನಂತೆ ಬೆಳಗಲಿ ಕನ್ನಡ ದೇಶ
ಆಪರಿ ಬೆಳೆಯಲಿ ಕನ್ನಡ ಬಳಗ ಕೋಶ ॥೧೫॥

ಸತ್ಯಶುದ್ಧ ದುಡಿಮೆಯದುವೆ ಬೆಳ್ಳಂ ಬೆಳಕು
ಸತಬಾಳ ಬದುಕು, ಅದುವೆ ಕರಿಯ ಕತಲು
ನಿತ್ಯ ದೀಪ ಬೆಳಗು ಗುರುಕುಮಾರ ನೆನೆನೆನೆದು. ॥೧೬॥

ಶ್ರೀಮತಿ ಶಿವಲಿಂಗಮ್ಮ ಕಳ್ಳಿ
ಹುಬ್ಬಳ್ಳಿ.

*Highlights of Deepavali Function at Nottingham 1989*









## CONGRATULATIONS TO PROUD PARENTS

Dr. and Dr. (Mrs.) Sarnobat of Treorchy – Rhondda were blessed with a daughter on 31st August, 1989 and she is named as Indira - Priya - Darshini.

Mrs. Vasu and Gurumallesh of Preston, became proud parents of a son named Pratham.

Mr. and Mrs. Raghunandan of Guildford, became proud parents for the second time.

---

## OBITUARY

DR. HIREKUDI.

Our beloved ex. Executive Committee member, Dr. Hirekudi, aged 49 years, sadly passed away in Belgaum, India, on 4th December, 1990. He had a very distinguished career in India as a leading E.N.T. surgeon, having passed M.S., D.L.O. He was a popular General Practitioner in Hornchurch, Essex for fifteen years. He contributed his unselfish service to Kannada Balaga in earlier years. Besides he and his beloved family were keen to participate in various cultural activities of Kannada Balaga – we all miss him dearly. Kannada Balaga expresses deep condolences to bereaved Mrs. Shantha Hirekudi and the young family – a son and two daughters.

---

The father of Dr. Aravind S. Kulkarni - deceased recently in India.

---

The father of Dr. Devaraj - deceased recently in India.

---

Dr. Miss Tejavati Murthy, the elder sister of Dr. Miss Abhayamba Murthy - deceased recently in India.

---

*I hold that when a person dies*
*His soul returns again to earth;*
*Arrayed in some new flesh-disguise,*
*Another mother gives him birth.*
*With sturdier limbs and brighter brain*
*The old soul takes the road again.*

– John Masefield

**FANCY A NICE HOME AWAY FROM THE HUSTLE AND BUSTLE OF CITY LIFE IN INDIA?**

**WHY NOT TRY DECCAN PARK NEAR POONA !**

DECCAN PARK IS GOING TO BE A BEAUTIFUL HOUSING COMPLEX SITUATED ABOUT 12 KILOMETRES FROM DECCAN GYMKHANA NEAR BANER/SUS VILLAGES, NOT FAR FROM THE RIVER MULA.

PLOTS OF 5,000 SQUARE FEET ARE AVAILABLE AT 50 RUPEES PER SQUARE FOOT. YOU DON'T HAVE TO WORRY ABOUT BEING CUT OFF FROM MODERN CIVILISATION – NEW DEVELOPEMENTS LIKE THE BANK OF MAHARASHTRA, HOUSING COLONY, NEW ASIAD TYPE STADIUM, RIVER VIEW PARK, ETC., ARE SPRINGING UP AROUND THIS COLONY.

FOR FURTHER INFORMATION, PLEASE CONTACT:

MRS. VIJAY THAKAR,
POONA, INDIA.
TELEPHONE POONA 330379

OR

MRS. ASHA DESHMUKH,
THORNTON HEATH, SURREY.
TELEPHONE 081 - 653 - 1703

# ಜನಪ್ರಿಯ ಗಾದೆಮಾತುಗಳು.

೧. 'ಅಂಗಳ ಹಾರಿ, ಗಗನ ಹಾರಬೇಕು.'
೨. 'ಅಂಬಲಿ ಕುಡಿದರೂ ಇಂಬಾಗಿ ಕುಡಿ.'
೩. 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ.' - (ಬಸವಣ್ಣ)
೪. 'ಅರಮನೆಯಿದ್ದರೂ ನೆರಮನೆ ಬೇಕು.'
೫. 'ಅಲಗಿನ ಗಾಯಕ್ಕಿಂತ ಗಲಗಿನ ಗಾಯ ಹೆಚ್ಚು.'
೬. 'ಅಳಿಯುವದು ಕಾಯ, ಉಳಿಯುವದು ಕೀರ್ತಿ.'
೭. 'ಆಕಳು ಕಪ್ಪಾದರೆ ಹಾಲು ಕಪ್ಪೇ?'
೮. 'ಆಡುವದಕ್ಕಿಂತ ಮಾಡುವದು ಲೇಸು.'
೯. 'ಆಡಿದ ಮಾತು, ಬಿಟ್ಟ ಬಾಣ ಬಂದೇ?'
೧೦. 'ಆದರವಿಲ್ಲದ ಅಮೃತಾನ್ನವೇಕೆ?' (ಪುರಂದರದಾಸರು)
೧೧. 'ಆನೆಯ ಭಾರ ಆನೆಗೆ, ಇರುವೆಯ ಭಾರ ಇರುವೆಗೆ.'
೧೨. 'ಆಪತ್ಕಾಲಕ್ಕೆ ಆದವನೇ ಬಂಧು.'

## ಬೇವು ಬೆಲ್ಲದೊಳಿಡಲೇನು ಫಲ?

ಬೇವು ಬೆಲ್ಲದೊಳಿಡಲೇನು ಫಲ। ಹಾವಿಗೆ ಹಾಲೆರೆದರೇನು ಫಲ।
ಕುಟಿಲವ ಬಿಡದಿಹ ಕುಜನರು ಮಂತ್ರವ। ಪಠನೆಯ ಮಾಡಿದರೇನು ಫಲ।
ಹಟಿಯನ್ನಿಡುವ ಜನರು ಮನದಲಿ। ವಿಠಲನ ನೆನೆದರೇನು ಫಲ।
ಕಪಟತನದಿ ವಂಚಿಸುತ ಮನುಜರು ಜಪಗಳ ಮಾಡಿದರೇನು ಫಲ।
ಕುಚಿತ ಬುದ್ಧಿಯನು ತ್ಯಜಿಸದೆ ನಿತ್ಯದಿ। ಉಪವಾಸವಿದ್ದರಿನ್ನೇನು ಫಲ।
ಮಾತಾ ಪಿತರನು ಬಳಲಿಸುವಂಥ ಮಗ। ಯಾತ್ರೆ ಮಾಡಿದರೇನು ಫಲ।
ಘಾತುಕ ತನವನು ಬಿಡದೆ ನಿರಂತರ। ಗೀತೆಯನೋದಿದರೇನು ಫಲ।
ಪತಿಯನ್ನು ನಿಂದಿಸಿ ಬೊಗಳುವ ಸತಿಯಳು। ವ್ರತಗಳ ಮಾಡಿದರೇನು ಫಲ।
ಅತಿಥಿಗಳ ಎಡೆಯಲಿ ಭೇದವ ಮಾಡುತ। ಗತಿಯನು ಬಯಸಿದರೇನು ಫಲ।
ಶ್ರೀನಿಧಿ ಪುರಂದರ ವಿಠಲನ ನೆನೆಯದೆ ಮೌನವ ಮಾಡಿದರೇನು ಫಲ।

ಸಂಗ್ರಹಕಾರ : ಡಾ. ಅರವಿಂದ. ಕುಲಕರ್ಣಿ.